**ಭರತ್ ಲಾಲ್,** ಭಾ.ಆ.ಸೇ
ಅಧ್ಯಕ್ಷರು ವಿತರಣ ಕಂಪನಿಗಳು
ಮತ್ತು
ವ್ಯವಸ್ಥಾಪಕ ನಿರ್ದೇಶಕರು

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**
ಕಾವೇರಿ ಭವನ, ಬೆಂಗಳೂರು - 560 009.
ಕಛೇರಿ : 22244556, 22214342
ಫ್ಯಾಕ್ಸ್ : 0091-080-22213526
ಇ-ಟಪಾಲು : md@kptcl.com

**ಪತ್ರ ಸಂಖ್ಯೆ: ಕವಿಪ್ರನಿನಿ/ವ್ಯನಿ/ಅಇಂ(ವಿ)/(ಎಂ.ಐ.ಎಸ್)/07-08** **07.08.2007.**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು-560 001.

ಮಾನ್ಯರೆ,

ವಿಷಯ: ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ಸೋಲಾರ್ ವಾಟರ್ ಹೀಟರ್" ವ್ಯವಸ್ಥೆಯನ್ನು ಅಳವಡಿಸುವ ಬಗ್ಗೆ.

ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ಕಟ್ಟಲು ಅನುಮತಿ ನೀಡುವಾಗ ಎರಡಕ್ಕಿಂತ ಮೇಲ್ಪಟ್ಟು ಕೊಠಡಿಗಳನ್ನು ಹೊಂದಿರುವ ಆರ್.ಸಿ.ಸಿ. ಮನೆಗಳನ್ನು ನಿರ್ಮಿಸುವಂತಹವರಿಗೆ "ಸೋಲಾರ್ ವಾಟರ್ ಹೀಟರ್" ವ್ಯವಸ್ಥೆಯನ್ನು ಅಳವಡಿಸುವುದನ್ನು ಕಡ್ಡಾಯಗೊಳಿಸುವುದು. ವಿದ್ಯುತ್ ಉಳಿತಾಯ ದೃಷ್ಟಿಯಿಂದ ಅಗತ್ಯವಾಗಿರುತ್ತದೆ. ಅಲ್ಲದೆ "ಸೋಲಾರ್ ವಾಟರ್ ಹೀಟರ್" ವ್ಯವಸ್ಥೆಯನ್ನು ಅಳವಡಿಸಿದ ಗ್ರಾಹಕರಿಗೆ ಮಾಹೆಯಾನ ಗರಿಷ್ಠ ರೂ. 40/- ರವರೆಗೆ ರಿಯಾಯಿತಿ ನೀಡಿ ಉತ್ತೇಜಿಸಲಾಗುತ್ತಿದೆ. "ಸೋಲಾರ್ ವಾಟರ್ ಹೀಟರ್" ಬಳಕೆ ಪರಿಸರ ಮಾಲಿನ್ಯವನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ಕಟ್ಟಲು ಅನುಮತಿ ನೀಡುವಾಗ "ಸೋಲಾರ್ ವಾಟರ್ ಹೀಟರ್" ವ್ಯವಸ್ಥೆಯ ಅಳವಡಿಕೆಯನ್ನು ಕಡ್ಡಾಯಗೊಳಿಸಿ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಲಾಗಿದೆ.

ಜಿಲ್ಲಾ ಪಂಚಾಯತ್ ಕಾರ್ಯಾಲಯ
ಉತ್ತರ ಕನ್ನಡ ಕಾರವಾರ
13 Aug 2007

ಜಿಲ್ಲಾ ಪಂಚಾಯತ್ ಕಾರ್ಯಾಲಯ
ಉತ್ತರ ಕನ್ನಡ ಕಾರವಾರ
16 Aug 2007
ದಿನಾಂಕ: ವಿಷಯ
ಅಧಿ. ಸಹಾ., ಉ.ಸ., ಮು.ಕಾ.

1030

ಎರಡನೆಯದಾಗಿ "ಸಿ.ಎಫ್.ಎಲ್" ಬಲ್ಬ್‌ಗಳನ್ನು ಸರ್ಕಾರಿ / ಸರ್ಕಾರೇತರ ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಿನ ರೀತಿಯಲ್ಲಿ ಉಪಯೋಗಿಸುವುದರಿಂದ ಹಾಲಿ ಉಪಯೋಗಿಸುತ್ತಿರು ಇನ್‌ಕ್ಯಾಂಡಸೆಂಟ್ ಬಲ್ಬ್‌ಗಳಿಗೆ ಹೋಲಿಸಿದಲ್ಲಿ ವಿದ್ಯುತ್‌ನಲ್ಲಿ ಹೆಚ್ಚು ಬೆಳಕನ್ನು ಪಡೆಯಬಹುದಾಗಿದೆ ಮತ್ತು ಪರಿಸರವೂ ಶುದ್ಧವಾಗಿರುತ್ತದೆ. ಆದ್ದರಿಂದ "ಸಿ.ಎಫ್.ಎಲ್" ಬಲ್ಬ್‌ಗಳನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸುವಂತೆ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ/-

ಅಧ್ಯಕ್ಷರು, ವಿತರಣಾ ಕಂಪನಿಗಳು
ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಬೆಂಗಳೂರು.

ಪ್ರತಿ:

ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉತ್ತರ ಕನ್ನಡ

ಅಧ್ಯಕ್ಷರು, ವಿತರಣಾ ಕಂಪನಿಗಳು
ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಬೆಂಗಳೂರು.